460 ಮೇಲ್ವಿಚಾರಕಿಯರ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ದಿನಾಂಕ 23-2-94 ರಲ್ಲಿ ಕರೆಯಲಾಗಿತ್ತು ಮೀಸಲಾತಿಯ ನೀತಿಯಲ್ಲಿ ಬದಲಾವಣೆಯ ಪ್ರಯುಕ್ತ ನೇಮಕಾತಿ ಕಾರ್ಯಸ್ಥಗಿತಗೊಳಿಸಲಾಗಿತ್ತು. ಈಗ ಸರ್ಕಾರದ ಆದೇಶ ಸಂಖ್ಯೆ : ಸಕಾಇ: 394 : ಬಿಸಿಎ : 95 ದಿನಾಂಕ : 14-2-96 ರೀತ್ಯಾ ಕ್ರಿಮಿಲೇಯರ್ ವ್ಯಾಪ್ತಿಯಲ್ಲಿ ಬರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ಮರು ಅಧಿಸೂಚನೆ ಹೊರಡಿಸಲಾಗಿದೆ. ಅರ್ಜಿ ಸ್ವೀಕರಿಸಲು 15-7-96 ರಂದು ಕಡೆಯ ದಿನಾಂಕವಾಗಿದ್ದಿತು. ಅಭ್ಯರ್ಥಿಗಳ ಆಯ್ಕೆಯನ್ನು ನಿಯಮಾನುಸಾರ ಮಾಡಲಾಗುವುದು.

ಉಪಾಧ್ಯಕ್ಷರು :- ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ :- (ಅ) ಗುಲ್ಬರ್ಗ ಜಿಲ್ಲೆಯ ಜೇವರ್ಗಿ ಸಮೀಪದ ಭೀಮ ಸೇತುವೆಯಿಂದ ಮ್ಯಾಕ್ಸಿ ಕ್ಯಾಬ್ ಬಿದ್ದು 20-30 ಜನ ಸತ್ತಿರುವುದು.

ಉಪಾಧ್ಯಕ್ಷರು :- ಮಾನ್ಯ ಧರ್ಮಸಿಂಗ್‌ರವರು ನಿನ್ನೆ ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇವೆಂದು ಹೇಳಿದ್ದರು. ಅವರೊಬ್ಬರಿಗೆ ಮಾತ್ರ ಅವಕಾಶವನ್ನು ಕೊಡುತ್ತೇನೆ.

(ಗೊಂದಲ)

+ ಶ್ರೀ ಧರ್ಮಸಿಂಗ್ (ಜೇವರ್ಗಿ) :- ಮಾನ್ಯ ಉಪಾಧ್ಯಕ್ಷರೇ, ಕಳೆದ ಮೂರು ದಿವಸಗಳ ಹಿಂದೆ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ಸಮೀಪಕ್ಕೆ ಭೀಮ ಸೇತುವೆಯಿಂದ ಮ್ಯಾಕ್ಸಿ ಕ್ಯಾಬ್ ಬಿದ್ದು 20-30 ಜನ ಸತ್ತಿದ್ದಾರೆಂದು ಸುದ್ದಿ ಬಂದಿದೆ. ಎಲ್ಲಾ ಕಡೆಯೂ ಈ ಸುದ್ದಿ ಹಬ್ಬಿದೆ. ನಾನು ಕೂಡ ಸಂಬಂಧಪಟ್ಟಂತಹ ಮಂತ್ರಿಗಳು ಮತ್ತು ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಭೇಟಿ ನೀಡಿದ್ದೆವು, ಮತ್ತು ಜಿಲ್ಲೆಗೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕೂಡ ನಾವು ಸಂಪರ್ಕಿಸಿದ್ದೆವು. ನಾನು ಸರ್ಕಾರದ ಮೇಲೆ ಯಾವುದೇ ಆರೋಪಣೆಯನ್ನು ಮಾಡುತ್ತಿಲ್ಲ. ಇಂತಹ ಒಂದು ದುರ್ಘಟನೆ ಕರ್ನಾಟಕ ರಾಜ್ಯದಲ್ಲಿ ಅದಕ್ಕೂ ಮಿಗಿಲಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಆಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಇವತ್ತು 10 ಗಂಟೆಗೆ ಮಾತನಾಡಿದೆ. ಈಗ ಮತ್ತೆ ಎರಡು ಶವಗಳು ಸಿಕ್ಕಿವೆ ಎಂದು ಹೇಳಿದ್ದಾರೆ. ಈ ಮ್ಯಾಕ್ಸಿ ಕ್ಯಾಬ್ ಹುಬ್ಬಳ್ಳಿಯಿಂದ ದಿನಪತ್ರಿಗಳನ್ನು ತಂದಿದ್ದು ಮತ್ತು ಅಲ್ಲಿಂದ ವಾಪಸ್ಸು ಹೋಗುವಾಗ ಅದರಲ್ಲಿ ಎಷ್ಟು ಜನರು ಕುಳಿತಿದ್ದರು, ಏನಾಯಿತು ಎಂಬುದು ಗೊತ್ತಿಲ್ಲ ಆ ಗಾಡಿಗೆ ಲೈಸನ್ಸ್ ಇದೆಯೊ, ಅಥವಾ ಇಲ್ಲವೊ? ದುರ್ಘಟನೆ ಆದಂತಹ ಭೀಮ ಸೇತುವೆ 40 ಅಡಿಗಳ ಆಳವನ್ನು ಹೊಂದಿದೆ. ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ಇದು 1954 ರಲ್ಲಿ ಬಿ.ಎಲ್. ದಾತಾರವರು ಆಗಿನ ಗೃಹಮಂತ್ರಿಯವರು ಅದನ್ನು ಉದ್ಘಾಟನೆಯನ್ನು ಮಾಡಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು.

ಈಗಾಗಲೇ ಸರ್ಕಾರದ ವತಿಯಿಂದ ಒಂದು ಹೇಳಿಕೆಯನ್ನು ಕೊಡ ಬೇಕಾಗಿತ್ತು. ಇದರ ಬಗ್ಗೆ ರಾಜ್ಯದ ಜನತೆಯು ಕೂಡ ನೋಡುತ್ತಿದ್ದಾರೆ. ಎಷ್ಟು ಶವಗಳು ಸಿಕ್ಕಿವೆ, ಎಷ್ಟು ಶವಗಳನ್ನು ಗುರುತಿಸಲಾಗಿದೆ. ಯಾರ್ಯಾರು ಇದ್ದಾರೆ ಎಂದು ಅಲ್ಲಿರುವಂತಹ ಸಾಕಷ್ಟು ಜನರು ನೌಕರರು ಇದ್ದಾರೆಂದು ತಿಳಿದುಬಂದಿದೆ. ಡೇವಿಡ್ ಎನ್ನುವವರು, ಮಕೂರ್ ಹುಸೇನ್, ಶರಣಪ್ಪ ಎನ್ನುವವರು ನನಗೆ ಗುರುತ್ತಿದ್ದಾರೆ. ಭೀಮರಾಯನಗುಡಿಯಲ್ಲಿ ಬೇರೆ ಕಡೆಯಲ್ಲಿ ಕೆಲಸ ಮಾಡುತ್ತಿರುವಂಥವವರು ಇದ್ದಾರೆ. ಇವತ್ತು ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ಮಂತ್ರಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಅಲ್ಲಿ ಪರಿಹಾರವನ್ನು ಕೊಡುವಂತಹ ಆದೇಶವನ್ನು ಕೊಟ್ಟಿದೆ. ಇನ್ನು ಪರಿಹಾರವನ್ನು ಕೊಡುವಂಥಾದ್ದು ಏನಿದೆ ಅದು ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಅಲ್ಲಿ ಪರಿಹಾರವನ್ನು ಕೊಡುವಂತಹ ಆದೇಶವನ್ನು ಕೊಟ್ಟಿದೆ. ಇನ್ನು ಪರಿಹಾರ ವನ್ನು ಕೊಡುವಂಥಾದ್ದು ಏನಿದೆ ಅದು ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಇವತ್ತು ಅಲ್ಲಿಗೆ ಹೋಗಬೇಕಾಗಿತ್ತು. ಆದರೆ ಇವತ್ತನವರೆಗೂ ಒಂದು ಪೈಸೆಯೂ ಹೋಗಿಲ್ಲ. ಆದರೂ ಕೂಡ ಜಿಲ್ಲಾಧಿಕಾರಿಗಳು ಜಿಲ್ಲಾ ಪೋಲೀಸ್ ಅಧಿಕಾರಿಗಳು ಮತ್ತು ಜೀವರ್ಗಿಯ ಸುತ್ತಮುತ್ತಲಿರುವಂತಹ ಸಿಬ್ಬಂದಿವರ್ಗದವರು ರಾತ್ರಿ ಹಗಲು ಎಷ್ಟು ಸಾಧ್ಯವೊ ಅಷ್ಟು ಅಂದರೆ ಈಗ 13 ಜನರನ್ನು ಐಡೆಂಟಿಫೈ ಮಾಡಿದ್ದಾರೆ. ಇವತ್ತು ಅಲ್ಲಿ ಪರಿಹಾರವನ್ನು ಯಾವ ರೀತಿ ಕೊಡಬೇಕಾಗಿದೆ, ಅಲ್ಲಿರುವಂತೆ ಸರ್ಕಾರಿ ನೌಕರರು ಏನಿದ್ದಾರೆ, ಅವರ ಡಿಫೆಂಡರ್ಸ್ ಏನಿದ್ದಾರೆ, ಅವರಿಗೆ ಏನು ಕೊಡಬೇಕೆಂದು ಮಾಡಿದ್ದೀರಿ? ಸರ್ಕಾರದ ವತಿಯಿಂದ ಏನು ಕಾರ್ಯಕ್ರಮವನ್ನು ಇವತ್ತಿನ ದಿವಸ ತೆಗೆದುಕೊಂಡಿದ್ದೀರಿ? ಇಂತಹ ದುರ್ಘಟನೆಯ ಬಗ್ಗೆ ಇಲ್ಲಿ ರಾಜ್ಯದ ಜನತೆ ಮತ್ತು ಜಿಲ್ಲೆಯ ಜನತೆಯು ಇದರ ಬಗ್ಗೆ ಆತುರದಿಂದ ನೋಡುತ್ತಿದ್ದಾರೆ. ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಹಾಗೂ ವಕ್ಫ್ ಖಾತೆಯ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೇ, 24 ನೇ ತಾರೀಖು ಬೆಳಿಗ್ಗೆ 7-30 ಗಂಟೆಗೆ ಒಂದು ಟೆಂಪೊ ಗುಲ್ಬರ್ಗಾದಿಂದ ಷಹಾಪುರಕ್ಕೆ ಹೋಗುವಂತಹ ಒಂದು ಲಾರಿಗೆ ಡಿಕ್ಕಿ ಹೊಡೆದು ಜೀರ್ಗಿಗೆ 4 ಕಿ. ಮಿ. ದೂರದಲ್ಲಿರುವಂತಹ ಕಟ್ಟಿ ಸಂಗವರಿ ಎಂಬ ಊರಿನ ಬಳಿ ನದಿಗೆ ಬಿದ್ದಿದೆ. ಇದುವರೆಗೂ 13 ಶವಗಳು ಸಿಕ್ಕಿವೆ. ಈ ವಾಹನ ಟಾಟಾ 8070 ಎಂದು ಇದರ ಕೆಪಾಸಿಟಿ 17 ಜನರು ಕುಳಿತುಕೊಳ್ಳುವಂಥಾದ್ದು ಮತ್ತು ತನಿಖೆಯಲ್ಲಿ ಈ ಗಾಡಿ ಹುಬ್ಬಳ್ಳಿಯ ಪರಮೇಶ್ವರ ಎನ್ನುವವರ ಹೆಸರಿನಲ್ಲಿದೆ. ಅದು ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ತೆಗೆದುಕೊಂಡು ಹೋಗಿ ಗುಲ್ಬರ್ಗಾಕ್ಕೆ 24 ನೇ ತಾರೀಖು ಬೆಳಿಗ್ಗೆ ಡೆಲಿವರಿ ಕೊಟ್ಟು ವಾಪಸ್ಸು ಹುಬ್ಬಳ್ಳಿಗೆ ಹೋಗುವ ವ್ಯಾನಾಗಿತ್ತು. ಇದು ಇನ್ನು ತನಿಖೆಯಾಗುತ್ತಿದೆ. ಅಲ್ಲಿ ಹೋಂ ಗಾರ್ಡ್‌ಗಳು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರು ಹಗಲು ರಾತ್ರಿ ಕೆಲಸ ಮಾಡಿದ್ದಾರೆ. ಆ ಬಾಡಿಗಳನ್ನು ತೆಗೆದುಕೊಂಡು ಬರಲು 40 ಅಡಿಗಳ ಕೆಳಗೆ ಹೋಗಿ ತಂದಿದ್ದಾರೆ. ಎಸ್.ಪಿ, ಡಿಐಜಿ,

ಕೆಎಸ್ಆರ್‌ಟಿಸಿ, ಕೆಇಬಿ,ಯವರು ಫೈರ್‌ಪೋರ್ಸ್ ಸರ್ವೀಸ್‌ನವರು ಗುರುತಿಸಲು ರಾತ್ರಿ ಹಗಲು ಕೆಲಸ ಮಾಡಿದ್ದಾರೆ. ಇನ್ನು ಕೆಲವು ಶವಗಳನ್ನು ಗುರುತಿಸಿಲ್ಲ. ಅವುಗಳನ್ನು ಗುರುತಿಸಲು ಆಸ್ಪತ್ರೆಯಲ್ಲಿ ಇಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಪರಿಹಾರ ಕೊಡುವಂತಹ ವಿಚಾರವನ್ನು ಅದನ್ನು ಹೇಗೆ ಮಾಡಬೇಕೆಂದು ನಾವು ಪರಿಶೀಲಿಸುತ್ತಿದ್ದೇವೆ. ಏಕೆಂದರೆ ಕೆಲವರು ಬಡವರು, ಅವರ ಹೆಸರುಗಳು ಬಂದಿವೆ. ಆ 13 ಜನರಲ್ಲಿ 10 ಜನರ ಹೆಸರಿನ ಪಟ್ಟಿ ಬಂದಿದೆ. ಅಬ್ದುಲ್ ಖಾದರ್, ಜಾವದ್ ಮಹಬೂಬ್ ಪರಮ್, ಬಸವರಾಜ್ ಪಾಟೀಲ್ ಹಲಮನಿ, ಶಿವರಾಜ್ ಸಂಗಪ್ಪ, ನಾಗರೆಡ್ಡಿ ಪಾಟೀಲ್, ಮಮ್ತಾಜ್ ಪಾಷ್, ವಿರುಪಾಕ್ಷಿ, ಗುರುರಾಜ್, ಸಲಾವುದ್ದೀನ್, ಮಕಾಡ್ ಮಿಲ್, ಪ್ರಕಾಶ್ ಇಷ್ಟು ಹೆಸರುಗಳು ನಮಗೆ ಬಂದಿದೆ. ಸರ್ಕಾರ ಇವರಿಗೆ ತಕ್ಷಣ ಏನು ಪರಿಹಾರ ಕೊಡಬೇಕೆಂದು ಪರಿಶೀಲನೆ ಮಾಡುತ್ತಿದೆ.

ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷರೇ, ಅವರಿಗೆ ಪರಿಹಾರವನ್ನು ಕೊಡುವಂಥಾದ್ದು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಘೋಷಣೆಯನ್ನು ಮಾಡಿದ್ದಾರೆ. ಆದರೆ ಇಲ್ಲಿಯವರೆಗೆ ಅವರಿಗೆ ಪರಿಹಾರವನ್ನು ಕೊಡುವಂತಹ ವ್ಯವಸ್ಥೆಯಾಗಿಲ್ಲ, ಅದನ್ನು ಮಾಡಬೇಕು. ಎರಡನೆಯದಾಗಿ ಆ ಸೇತುವೆ ಏನಿದೆ ಅದಕ್ಕೆ ಪ್ರೊಟೆಕ್ಷನ್ ವಾಲ್ ಮಾಡಬೇಕು. ಇದು 41 ವರ್ಷಗಳ ಹಿಂದೆ ಕಟ್ಟಿದಂತಹ ಸೇತುವೆಯಾಗಿದೆ. ಇವತ್ತು ನಾವು ಆರೋಪಣೆಯನ್ನು ಮಾಡುತ್ತಿಲ್ಲ. ಆದರೆ ಸೇತುವೆ ಏನಾಗಿದೆ ಎಂದರೆ, ಇದು ಗುಲ್ಬರ್ಗಾದಿಂದ ಬೆಂಗಳೂರಿಗೆ ಬರುವಂತಹ ಹೆದ್ದಾರಿಯಲ್ಲಿರುವಂತಹ ಸೇತುವೆಯಾಗಿದೆ. ಇದಕ್ಕೆ ಪಿ.ಡಬ್ಲ್ಯೂ.ಡಿ ಸೆಕ್ರೆಟರಿಯನ್ನು ಉಚ್ಚ ಅಧಿಕಾರಿಗಳನ್ನು ಕಳುಹಿಸಿ ಇದರ ಡ್ಯೂರಬಿಲಿಟಿ ಹೇಗೆ ಇದೆ ಎಂಬುದನ್ನು ಪರೀಕ್ಷೆ ಮಾಡುವ ವ್ಯವಸ್ಥೆಯಾಗಬೇಕು. ಇದರ ಬಗ್ಗೆ ತಾವು ವಿಶೇಷವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು.

+ **ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) :-** ನಾನು ವಿಶೇಷವಾಗಿ ಹೇಳುವುದೇನೆಂದರೆ, ಈ ಮ್ಯಾಕ್ಸಿಕ್ಯಾಬ್ಸ್ ಇಂಥವಕ್ಕೆ ನೀವೇನು ಅನುಮತಿಯನ್ನು ಕೊಡುತ್ತೀರಲ್ಲ, ಇವರು, ಅವುಗಳ ಸಾಮರ್ಥ್ಯಕ್ಕಿಂತ ಹೆಚ್ಚಿಗೆ ಹಾಕಿಕೊಂಡು ಹೋಗುತ್ತಾರೆ, ಪೋಲೀಸ್‌ನವರು ಏನು ಮಾಡುತ್ತಿದ್ದರು? ಟ್ರಾಫಿಕ್‌ನವರು ಏನು ಮಾಡುತ್ತಿದ್ದರು? ಆರ್.ಟಿ.ಓ.ನವರು ಏನು ಮಾಡುತ್ತಿದ್ದರು? ಇದರ ತಪಾಸಣೆಯನ್ನೇ ಮಾಡುವುದಿಲ್ಲ. ಇದು ಒಂದೇ ಅಪಘಾತವಿರಬಹುದು ಆದರೆ ಅನೇಕ ಅಪಘಾತಗಳು ಆಗತಕ್ಕಂಥದ್ದು ಏತಕ್ಕೆಂದರೆ, ಅವರಿಗೆ ನೀವೇನು ಅನುಮತಿಯನ್ನು ಕೊಡುತ್ತೀರಿ, ಆ ಸಾಮರ್ಥ್ಯಕ್ಕಿಂತಲೂ ಅವರು ಎರಡು ಪಟ್ಟು ಒಳಗೆ ಹಾಕಿಕೊಂಡು, ನಿಂತು, ಕುಳಿತು, ಮೇಲೆ, ಕೆಳಗೆ ಹಾಕುವುದರಿಂದ ಇವತ್ತು ಇಂತಹ ಒಂದು ದುರ್ಘಟನೆ ಆಗುತ್ತಿದೆ. ಅದನ್ನು ನಿಲ್ಲಿಸತಕ್ಕಂಥ ವ್ಯವಸ್ಥೆಯನ್ನು ಆರ್.ಟಿ.ಓ.ನವರು ಏನು ಮಾಡಿದರು? ಪೋಲೀಸ್‌ನವರು ಏನು ಮಾಡಿದರು? ಏತಕ್ಕೆ ನೀವು ಪರ್ಮಿಷನ್‌ಅನ್ನು ಕೊಡುತ್ತೀರಿ? ಇದನ್ನು ಈ ಸದನದಲ್ಲಿ ನಿಮ್ಮ ಗಮನಕ್ಕೆ ಅನೇಕ ಸಾರಿ ತಂದರೂ ಕೂಡ ಇಂಥದ್ದಕ್ಕೆ ಅವಕಾಶ ಮಾಡಿಕೊಡುವುದರಿಂದ ಏನಾಗುತ್ತದೆ? ಇವತ್ತೆ ನಡೆದಿದೆ ಎಂದಲ್ಲ, ಆದರೆ ಇದಕ್ಕೆ

ಒಂದು ಹತೋಟಿಯಾದರೂ ಬೇಕಲ್ಲ, ಅದಕ್ಕಾಗಿ ತಾವು ಅದರ ಬಗ್ಗೆಯೂ ಕೂಡ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ಸಂಬಂಧಪಟ್ಟಂಥ ಅಧಿಕಾರಿಗಳು ಯಾರು? ಇದು ಯಾವ ರೀತಿಯಾಗಿ ಲ್ಯಾಪ್ಸ್ ಆಗಿದೆ? ಎರಡನೆಯದು ಅವರು ಹೇಳಿದಂತೆ, ಆ ಬ್ರಿಡ್ಜ್ ಹತ್ತಿರ ಸ್ವಲ್ಪ ಸಿಂಕ್ ಆಗಿದೆ. ಒಂದೇ ಸಮಯದಲ್ಲಿ ಎರಡು ವಾಹನಗಳು ಬರುವು ದಕ್ಕಾಗುವುದಿಲ್ಲ. ಒಂದು ಕಡೆ ಲಾರಿ ಇನ್ನೊಂದು ಕಡೆ ಟೆಂಪೊ ಆಗಲಿ, ಕಾರ್ ಆಗಲಿ ಹೋಗುವುದಕ್ಕಾಗುವುದಿಲ್ಲ. ಆವಾಗ ಏನಾಗುತ್ತದೆಂದರೆ, ಸ್ವಾಭಾವಿಕವಾಗಿ, ಸಿಂಕ್ ಇರ ತಕ್ಕಂಥ ಜಾಗದಲ್ಲಿ ಅಪಘಾತಗಳಾಗತಕ್ಕಂಥ ಸಾಧ್ಯತೆಗಳು ಜಾಸ್ತಿ ಇವೆ. ದಯವಿಟ್ಟು ಆದನ್ನೂ ಕೂಡ ಮಾಡಬೇಕು, ಮತ್ತು ಸಂಬಂಧಪಟ್ಟಂಥ ಆರ್.ಟಿ.ಓಗಳಿಗೆ, ಪೋಲಿಸರಿಗೆ ಸೂಚನೆಯನ್ನು ಕೊಡಬೇಕು. ಇಂಥ ಘಟನೆಗಳು ಮತ್ತೆ ನಡೆಯದ ರೀತಿಯಲ್ಲಿ ಮತ್ತು ಓವರ್ ಲೋಡ್ ಹಾಕಿಕೊಂಡು ಹೋಗುವುದು ಆಗಬಾರದೆನ್ನುವ ಸೂಚನೆಗಳು ಹೋದರೆ ಒಳ್ಳೆಯದು ಎನ್ನುವ ಮಾತನ್ನೂ ಕೂಡ ಹೇಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು) :– ಮಾನ್ಯ ಸಭಾಧ್ಯಕ್ಷರೇ, ಹಿರಿಯ ಸದಸ್ಯರಾದ ಧರ್ಮಸಿಂಗ್‌ರವರು ಏನೊಂದು ಸಲಹೆಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಕೂಡಲೇ ಅಲ್ಲಿಗೆ ಇಂಜಿನಿಯರ್ಸ್ ಅಲ್ಲ ಚೀಫ್ ಇಂಜಿನಿಯರ್‌ಅನ್ನು ಕಳುಹಿಸಿ ಆ ಸೇತುವೆಯನ್ನು ಇನ್‌ಸ್ಪೆಕ್ಷನ್ ಮಾಡಿಸಿ, ಕೂಡಲೇ ಅದನ್ನು ರಕ್ಷಣೆಯ ದೃಷ್ಟಿಯಿಂದ ಯಾವ ರೀತಿ ರಿಪೇರಿ ಮಾಡಿಸಬೇಕು ಆ ರೀತಿ ಸರ್ಕಾರ ಕೂಡಲೇ ಮಾಡುತ್ತದೆಂದು ಅವರಿಗೆ ಆಶ್ವಾಸನೆಯನ್ನು ಕೊಡುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಇನ್ನೊಂದು ಅಂಶವನ್ನು ಏನು ಹೇಳಿದ್ದಾರೆ, ನಾನು ವಾದವೇನು ಮಾಡುತ್ತಿಲ್ಲ, ಈ ನಿರ್ದಿಷ್ಟ ಪ್ರಕರಣದಲ್ಲಿ ನಾವೇನು ನಂಬರ್ ಆಫ್ ಬಾಡಿಸ್ ರಿಕವರಿ ಮಾಡಿದ್ದೇವೆ, ಬಹಳ ಸರ್ಚ್ ಮಾಡಿದ್ದೇವೆ ನಮಗೆ ಅಷ್ಟೇ ಬಾಡೀಸ್ ಸಿಕ್ಕಿರುವುದು. ಮತ್ತು ಸೆವೆಂಟೀನ್ ಪರ್ಸನ್ ಕೆಪಾಸಿಟಿ ಇರುವುದು, ಈ ನಿರ್ದಿಷ್ಟ ವ್ಯಾನ್‌ನಲ್ಲಿ ಜಾಸ್ತಿ ಲೋಡ್ ಇರಲಿಲ್ಲ. ಆದರೆ ಅವರೇನು ಹೇಳುತ್ತಿದ್ದಾರೆ ಅವರ ವಾದ ಏನಿದೆಯೆಂದರೆ, ಇಡೀ ರಾಜ್ಯದಲ್ಲಿ ಇದೊಂದು ಮೆನೆಸ್ ಆಗಿಬಿಟ್ಟಿದೆ. ಎಲ್ಲಿ ನೋಡಿದರು ಈ ಮ್ಯಾಕ್ಸಿಕ್ಯಾಬ್‌ಗಳು ಹೆವಿ ಪ್ಯಾಸೆಂಜರ್ಸ್ ಹಾಕಿಕೊಂಡು ಈ ಕಡೆ ಡೋರ್ ಓಪನ್ ಆಗಿರುತ್ತದೆ, ಹಿಂದುಗಡೆ ಡೋರ್ ಓಪನ್ ಆಗಿರುತ್ತದೆ, ಈ ಕಡೆ ನಾಲ್ಕೈದು ಜನ ಇರುತ್ತಾರೆ, ಆ ಕಡೆ ನಾಲ್ಕೈದು ಜನ ಇರುತ್ತಾರೆ, ಪಾರ್ಕಿಂಗ್ ಕಡೆಗೆ ಹಿಂದುಗಡೆ ಲಾರಿಗಳು ಟ್ರಕ್‌ಗಳು ಬರುತ್ತಿದ್ದರೂ ರೋಡ್‌ನಲ್ಲಿ ಒಂದೊಂದು ಕಡೆ ದಿಢೀರನೆ ನಿಲ್ಲಿಸಿಬಿಡುತ್ತಾರೆ. ಆದರಿಂದಲೂ ಬಹಳ ಅಪಘಾತಗಳು ಆಗುತ್ತಿವೆ, ನಾನು ಸಾರಿಗೆ ಸಚಿವರಾದ ಮಾನ್ಯ ಸಿಂಧ್ಯಾರವರೊಡನೆ ಚರ್ಚೆ ಮಾಡಿದ್ದೇನೆ.

ಉಪಾಧ್ಯಕ್ಷರು :– ಈ ಸಂಬಂಧವಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ಸ್ವಲ್ಪ ಮಾತನಾಡುತ್ತಾರೆ.